

## ಅಪ್ಪ ಅಮ್ಮಂದಿರು ಕಳೆದುಹೋಗಿದ್ದಾರೆ!

ಸುಮಾ ಮತ್ತು ಸುರೇಶ್ ಇಬ್ಬರೂ ಶಿಕ್ಷಕರು. ಒಬ್ಬನೇ ಮಗ ಸುಶೀಲ್‌ನನ್ನು ಮುದ್ದಿನಿಂದ ಸಾಕಿದ್ದಾರೆ. ಆದರೆ ಅವನ ವಿದ್ಯಾಭ್ಯಾಸದ ಬಗೆಗೆ ಅವರಿಗೆ ಎಳ್ಳಷ್ಟೂ ತೃಪ್ತಿಯಿಲ್ಲ. 'ನೀನು ಕಡೆಯ ಪಕ್ಷ ಮೊದಲ ದರ್ಜೆಯಲ್ಲಾದರೂ ಉತ್ತೀರ್ಣನಾಗದಿದ್ದರೆ ನನಗೆ ಸಹೋದ್ಯೋಗಿಗಳು, ವಿದ್ಯಾರ್ಥಿಗಳ ಮಧ್ಯೆ ತಲೆಯೆತ್ತಿ ತಿರುಗುವುದು ಕಷ್ಟ' ಎಂದು ಸುರೇಶ್ ಹೇಳುತ್ತಿದ್ದರು. ಸುಮಾ ಮಗನ ಅಂಕಗಳನ್ನು ಹೆಚ್ಚಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು. ಅವರಿಬ್ಬರೂ ಮಗನನ್ನು ತುಂಬಾ ಪ್ರೀತಿಸುತ್ತಿದ್ದರು ಮತ್ತು ಅವನಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ಪ್ರಾಮಾಣಿಕ ಕಾಳಜಿ ಹೊಂದಿದ್ದರು ಎನ್ನುವುದು ನಿಸ್ಸಂಶಯ. ಆದರೆ ಪರಿಣಾಮವೇನಾಗಿತ್ತು?

ಒಂದು ದಿನ ಸುಶೀಲ್ ಮನೆ ಬಿಟ್ಟು ಯಾರಿಗೂ ಹೇಳದೇ ಹೊರಟುಹೋಗಿದ್ದ. ಕಷ್ಟದಿಂದ ಹುಡುಕಿ ಕರೆತರಲು ಹೋದಾಗ ಅವನು ಉತ್ತರ ದಂಗುಬಡಿಸುವಂತಿತ್ತು. 'ನಿಮಗೆ ಹೆಚ್ಚು ಅಂಕಗಳಿಸುವವನು ಮಾತ್ರ ಮಗ ಎನ್ನಿಸುವುದಾದರೆ ಬೇರೆಯವರನ್ನು ಹುಡುಕಿಕೊಳ್ಳಿ. ನನಗೆ ಅದು ಸಾಧ್ಯವಿಲ್ಲ. ನನ್ನನ್ನು ನನ್ನ ದಾರಿಗೆ ಬಿಟ್ಟುಬಿಡಿ'.

ಇಂತಹ ಮಗನನ್ನು ನಮ್ಮ ಸಿನಿಮಾಗಳು ಖಳನಾಯಕನನ್ನಾಗಿ ಚಿತ್ರಿಸುವುದನ್ನು ನಾವು ನೋಡುತ್ತಿರುತ್ತೇವೆ. ಆದರೆ ಸುಶೀಲ್‌ನ ಮಾನಸಿಕ ತಳಮಳಗಳನ್ನು ನಾವು ಗಮನಿಸುತ್ತಲೇ ಇಲ್ಲ. ಆಪ್ತಸಮಾಲೋಚನೆಗೆ ಬಂದಾಗ ಸುಮಾರು ಎರಡು ಗಂಟೆಯ ಮಾತುಕತೆಯ ನಂತರ ಸುಮಾ ಹೇಳಿದ್ದು ಮನಮುಟ್ಟುವಂತಿತ್ತು ನಾವು ಮನೆಯಲ್ಲಿ ಕೂಡ ಸುಶೀಲ್‌ಗೆ ಶಿಕ್ಷಕರೇ ಆಗಿರುವಂತೆ ಅನಿಸುತ್ತದೆ. ಮಗನಿಗೆ ಅಪ್ಪ–ಅಮ್ಮ ಆಗಿರಲೇ ಇಲ್ಲ.

ಮಗುವಿಗೆ ಮೂರ್ನಾಲ್ಕು ವರ್ಷವಾಗುವಷ್ಟರಲ್ಲಿ ಇವತ್ತಿನ ಸಾಕಷ್ಟು ಅಪ್ಪ ಅಮ್ಮಂದಿರು ಕಳೆದುಹೋಗುತ್ತಾರೆ. ನಂತರದಲ್ಲಿ ಮಕ್ಕಳು ಬೆಳೆಯುವುದು ವಿದ್ಯೆಯನ್ನು ಕಲಿಸುವವರು, ಊಟತಿಂಡಿ ಕೊಡುವ ಅಡುಗೆಯವರು, ಶಿಸ್ತನ್ನು ಕಲಿಸುವ ಹಾಸ್ಟೆಲ್ ವಾರ್ಡನ್, ಹಣದ ಅಗತ್ಯವನ್ನು ಪೂರೈಸುವ ಬ್ಯಾಂಕರ್–ಮುಂತಾದ ವಿವಿಧ ಪಾತ್ರಾಭಿನಯ ಮಾಡುವ ಅಪ್ಪ–ಅಮ್ಮಂದಿರ ಜೊತೆ. ಪ್ರಪಂಚದ ಎದುರು ಶಿಸ್ತಿನ ಯಶಸ್ವೀ ವ್ಯಕ್ತಿಯನ್ನು ಪ್ರದರ್ಶಿಸುವ ಹಂಬಲದಲ್ಲಿ ಪೋಷಕರು ಮಕ್ಕಳೊಡನೆ ಸಂತೋಷವನ್ನು ಹಂಚಿಕೊಳ್ಳುವುದನ್ನೇ ಮರೆಯುತ್ತಾರೆ.

### ಮಾತೃತ್ವದ ವೈಭವೀಕರಣ

ಈ ಮಾತುಗಳು ಬಹಳ ಕ್ರೂರವಾಗಿ ಕಾಣಬಹುದು. ಎಲ್ಲಾ ಧರ್ಮ ಮತ್ತು ಸಂಸ್ಕೃತಿಗಳಲ್ಲಿ ಲಾಗಾಯ್ತಿನಿಂದಲೂ ತಾಯಂದಿರನ್ನು ಮತ್ತು ತಾಯ್ತನವನ್ನು ವೈಭವೀಕರಿಸಲಾಗಿದೆ. ಒಂಬತ್ತು ತಿಂಗಳು ಹೊತ್ತು ಹೆತ್ತು ಮೊಲೆಯುಣ್ಣಿಸಿ ಸಾಕಿ ಸಲಹಿ ಎಷ್ಟೆಲ್ಲಾ ನೋವುಗಳನ್ನು ಸಹಿಸಿಕೊಂಡು, ಏನೆಲ್ಲಾ ತ್ಯಾಗವನ್ನು ಮಾಡಿ... ಎನ್ನುವ ಮಾತುಗಳು ಎಲ್ಲರ ಬಾಯಲ್ಲಿ ಹರಿದಾಡುತ್ತಿರುತ್ತವೆ. ಕಲೆ, ಸಾಹಿತ್ಯ, ಸಿನಿಮಾಗಳಲ್ಲಿ ಕೂಡ ಅಮ್ಮಂದಿರನ್ನು ದೈವತ್ವಕ್ಕೇರಿಸಲಾಗಿದೆ. ಇವೆಲ್ಲವನ್ನೂ ಕ್ಷುಲ್ಲಕ ಎಂದು ಹೇಳುವುದು ಇಲ್ಲಿನ ಉದ್ದೇಶವಲ್ಲವಾದರೂ ವೈಭವೀಕರಿಸುವುದು ತಾಯಂದಿರ ಮನಃಸ್ಥಿತಿಯನ್ನು ವಾಸ್ತವದಿಂದ ದೂರಕ್ಕೆ ತೆಗೆದುಕೊಂಡು ಹೋಗಬಹುದು ಎನ್ನುವ ಎಚ್ಚರಿಕೆ ಇರಬೇಕಾಗುತ್ತದೆ.

'ಇತ್ತೀಚೆಗೆ ತೀರಿಕೊಂಡ ನನ್ನ ಅಮ್ಮ ಯಾವತ್ತೂ ನನಗೆ ಅಮ್ಮ ಅನ್ನಿಸಿರಲೇ ಇಲ್ಲ' ಎಂದು ಭಾರವಾದ ಮನಸ್ಸಿನಿಂದ ನನ್ನೆದುರು ಕುಳಿತಿದ್ದ ಮೂವತ್ತರ ಯವಕ ಹೇಳಿದ್ದ. ಇದು ನನ್ನ ವೈಯುಕ್ತಿಕ ಜೀವನದ ಅನುಭವವೂ ಆಗಿತ್ತು. ಸತ್ತು ಹೋಗಿರುವ ತಾಯಿಯನ್ನು ದೈವತ್ವಕ್ಕೇರಿಸಿ ಆ ಯುವಕನ ಮನಸ್ಸಿನಲ್ಲಿ ಇರಬಹುದಾದ ಮಾನಸಿಕ ಗಾಯಗಳನ್ನು ಹೊರತರುವುದಾದರೂ ಹೇಗೆ? ತಾಯಿ ಮತ್ತು ಮಕ್ಕಳ ಸಂಬಂಧವನ್ನು ಕೇವಲ ಮಾನವೀಯ ನೆಲೆಯಲ್ಲಿ ನೋಡುತ್ತಾ ಹೋದಾಗ ಮಾತ್ರ ಆ ಯುವಕನಿಗೆ ಅವನ ಬಾಲ್ಯದ ಅನುಭವಗಳನ್ನು ಅರ್ಥೈಸಿಕೊಳ್ಳುವುದು ಸಾಧ್ಯವಾಗುತ್ತಾ ಹೋಯಿತು. ಇದರಿಂದ ತಾಯಿಯ

